ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 657/2022

**ಪಿ ಡಬ್ಲ್ಯೂಃ 1**

ಸಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ವಿಜಯ ಠಾಕೂರ |
| ತಂದೆಯ ಹೆಸರು | : | ಬೋಪಾಜಿ |
| ವಯಸ್ಸು | : | 19 |
| ಉದ್ಯೋಗ | : | ಚಾಲಕರು |
| ವಾಸಸ್ಥಳ | : | ಅಹ್ಮದಾಬಾದ ಗುಜರಾತ |

ದಿನಾಂಕಃ 15-04-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಆರೋಪಿಯ ಪರಿಚಯ ಇದೆ. ಚಾಸಾ -4 ಮತ್ತು ಚಾಸಾ-5 ರವರ ಪರಿಚಯ ಇರುವುದಿಲ್ಲ. ಮೃತ ಅಜಯ ಠಾಕರ ರವರು ಪರಿಚಯ ಇರುತ್ತಾರೆ. ಸಾಕ್ಷಿದಾರರರಿಗೆ ಅವರ ಸಹಿ ಇರುವ ದಿನಾಂಕ 08-01-2022ರ ದೂರನ್ನು ಹಾಗೂ ಮಹಜರನ್ನು ತೋರಿಸಲಾಗಿ, ಸದರಿ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು **ನಿಪಿ-1** ಎಂದು, ಮಹಜರನ್ನು **ನಿಪಿ-2** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಗಳನ್ನು **ನಿಪಿ-1 ಎ** ಮತ್ತು **ನಿಪಿ-2 ಎ** ಎಂದು ಗುರುತಿಸಲಾಯಿತು.

2. ನಿಪಿ-1 ಮತ್ತು 2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಅಪಘಾತ ಹೇಗೆ ಆಯಿತು ಎಂದು ನನಗೆ ತಿಳಿದಿಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿರುವುದಿಲ್ಲ. ಕಡತದಲ್ಲಿನ ಹತ್ತು ಪೋಟೋಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ ಮೇರೇಗೆ ಅವುಗಳನ್ನು ಕ್ರಮವಾಗಿ **ನಿಪಿ-3** ರಿಂದ **ನಿಪಿ-12** ಎಂದು, ಸಿಡಿಯನ್ನು **ನಿಪಿ-13** ಎಂದು ಗುರುತಿಸಲಾಯಿತು. ಪೋಲಿಸರ ಕೋರಿಕೆಯ ಮೇರೆಗೆ ಪೋಟೋಗಳನ್ನು ನೀಡಿದ್ದು, ಯಾವ ಕಾರಣಕ್ಕಾಗಿ ತೆಗೆಯಲಾಯಿತು ಎಂದು ನನಗೆ ತಿಳಿದಿಲ್ಲ.

**ಪಿ ಡಬ್ಲ್ಯೂಃ 1**

**ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 07-01-2022 ರಂದು ನಮ್ಮ ಲಾರಿಯನ್ನು ಬೆಂಗಳೂರಿನಿಂದ ಗುಜರಾತಿಗೆ ಹೋಗಲು ದಾವಣಗೆರೆ ಸಮೀಪ ಹೋಗುತ್ತಿದ್ದಾಗ ಲಾರಿ ಸಂಖ್ಯೆ ಜಿ ಜೆ -02/ವಿವಿ-0660 ರ ಮಾಹಿತಿ ಬಗ್ಗೆ ಜಿತೇಶ ಕುಮಾರ ಎಂಬುವವರು ಕೇಳಲಾಗಿ ನಾನು ಕೂಡಲೇ ರಾಣೇಬೆನ್ನೂರು ಬೈ ಪಾಸ್ ಹತ್ತಿರ ಹೋಗಿ ನೋಡಿದಾಗ ಅಂತರವಳ್ಳಿ ಬ್ರಿಡ್ಜ ಸಮೀಪ ಸದರಿ ಲಾರಿಯು ರಸ್ತೆಯ ಗಟಾರದಲ್ಲಿ ಎರಡು ಹೋಳಾಗಿ ಬಿದ್ದಿತ್ತು. ಅದರಲ್ಲಿದ್ದ ಕ್ಲೀನರ್ ಅಜಯ ಠಾಕೂರ ರವರಿಗೆ ತೀವ್ರ ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದರು ಎಂದರೆ ಸರಿ. ಆರೋಪಿಯು ಸದರಿ ವಾಹನವನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಮುಂದೆ ಹೋಗುತ್ತಿದ್ದ ಯಾವುದೋ ವಾಹನವನ್ನು ಎಡಗಡೆಯಿಂದ ಓವರ್ ಟೇಕ್ ಮಾಡಲು ಹೋಗಿ ನಿಯಂತ್ರಣ ತಪ್ಪಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಗಾಯಾಳುಗಳಿಗೆ ಉಪಚರಿಸದೇ ಆರೋಪಿ ಸ್ಥಳದಿಂದ ಪರಾರಿ ಆಗಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ನಿಪಿ-1 ರ ದೂರಿನ ಮೇರೆಗೆ ಪೋಲಿಸರು ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಮಹಜರ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ ಆ ಕಾಲಕ್ಕೆ ನಿಪಿ-3 ರಿಂದ 12 ಪೋಟೋಗಳನ್ನು ತೆಗೆಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಗೂ ಆರೋಪಿಯು ಒಂದೇ ಕಂಪನಿಗೆ ಸೇರಿದ ಬೇಕರಿ ಸಾಮಗ್ರಿಗಳನ್ನು ಸಾಗಿಸುವ ಲಾರಿಗಳಲ್ಲಿ ಚಾಲಕರು ಆಗಿದ್ದೇವೆ ಎಂದರೆ ಸರಿ. ಆದ್ದರಿಂದ ಪ್ರಕರಣವನ್ನು ರಾಜಿ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಆದ್ದರಿಂದ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

**ಪಿ ಡಬ್ಲ್ಯೂ 1**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.                    ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ.                    ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.